ನೋಟಿಫಿಕೇಷ೯.

ತಾರೀಖು 9ನೇ ಮೇ 1890.

ಇದರಿಂದ ಸಕಲಜನರಿಗೂ ತಿಳಿಯಪಡಿಸುವದೇನಂದರೆ, ಶಿವಮೊಗ್ಗಾ ಫಾರೆಸ್ಟ್ರಿ ರೇಂಜ್ ವುತ್ಪತ್ತಿಯಾಗಿರುವ ಈ ಕೆಳಗೆ ನಮೂರಿಸಿರುವ ನಾಟಾಗಳು ಬಾಜಾದಲ್ಲಿ ಕಾಣಿಸಿರುವ ತಾರೀಖುಗಳಲ್ಲಿ ಆಯಾ ಡಿಪೋದಲ್ಲಿ ಹರಾಜು ಮೂಲಕ ವಿಕ್ರಯಿಸಲ್ಪಡುವವು.

ನಂಬರ್.	ಡಿಪೋ ಹೆಸರು.	ಹರಾಜು ತಾರೀಖು.	ಅದದು.	ವಿವರ ವಗೈರೆ.
1	ಕಣಬೂರು ..	21—6—90	150	ಜಂಗ್ಲೀನಾಟಾ ಮುಖ್ಯವಾಗಿ ಹೊನ್ನೆ ಮತ್ತು ಮತ್ತಿ.
2	ಸಮುದ್ರದಹಳ್ಳಿ ..	23—6—90	500	
3	ಶಿವಮೊಗ್ಗಾ ..	25—6—90	200	ಸಾಗವಾನಿ ಮತ್ತು ಜಂಗ್ಲಿನಾಟಾಗಳು ಮತ್ತು ತುಕಡೆಗಳು ಸಹ.
4	ಆಯನೂರು ..	27—6—90	400	
		ಜುಮ್ಲಾ	1250	

ಷರತ್ತುಗಳು—ಸ೯ 1887ನೇ ಇಸವಿ ಆಗಸ್ಟ್ 30ನೇ ವಸ್ತುಂ 99ನೇ ನಂಬರ್ ಗವರ್ನಮೆಂಟ್ ನೋಟಿಫಿಕೇಷ೯ ನೋಡಿ ಕೊಳ್ಳತಕ್ಕದ್ದು.

ಸದರೀ ನೋಟಿಫಿಕೇಷ೯ ಹರಾಜ್ ಕಾಲದಲ್ಲಿ ಓದಲ್ಪಡುವದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್ಸ್ಪೆಕ್ಟರ್ ಜನರಲ್.

ಬೆಂಗಳೂರು ಡಿಸ್ಟ್ರಿಕ್ಟ್.

ಇಸ್ತಿಹಾರ್ ನಾಮೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಷಹರ್ ಮಜಕೂರ್ ಕೋಟೇಲಿ ಇರುವ ಈ ಕೆಳಗೆ ತಪಶೀಲ್ ಮಾಡಿ ಯಿರುವ ಕಟ್ಟಡಗಳು 1890ನೇ ಇಸವಿ ಜುಲೈ 7ನೇ ತಾರೀಖು ಸೋಮುವಾರ ದಿನ ಸಿಟಿ ಮ್ಯುನಿಸಿಪೆಲ್ ವೈಸ್ ಪ್ರೆಸಿಡೆಂಟರವರ ಸಮಕ್ಷಮ ಆ ಸ್ಥಳದಲ್ಲಿ ಹರಾಜು ಮಾಡಲ್ಪಡುತ್ತೆ. ಹರಾಜ್ ಸದರೀ ತಾರೀಖು ದಿವಿ 12 ಘಂಟೆಗೆ ಷುರು ಮಾಡಿ ಹರಾಜಿನಲ್ಲಿ ಜಡ ದರಖಾಸ್ತು ಮಾಡಿದವರಿಗೆ ಬಿಡಲ್ಪಡುತ್ತೆ.

2. ಹರಾಜಿನಲ್ಲಿ ಪಡದವನು ಕೂಡ್ಲೆ ಜಡ ದರಖಾಸ್ತು ಮೊಬಲಗ ಪೈಕಿ ಕೇಕಡಾ 25ರ ಪ್ರಕಾರ ಡಿಪಾಜಿಟ್ ಹಾಜರ್ಮಾಡಬೇಕು. ಹರಾಜು ತಾರೀಖು ಲಾಗಾಯತು 15 ದಿವಸಗಳ ವಳಗಾಗಿ ಬಾಕಿ ಮೊಬಲಗು ಪಾವತಿ ಮಾಡಬೇಕು, ತಪ್ಪಿದಲ್ಲಿ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ದಂಡವಾಗಿ ಸರ್ಕಾರಕ್ಕೆ ತೆಗದುಕೊಳ್ಳಲ್ಪಡುವದು.

3. ವಾಯಿದೆ ಮೇರಿಗೆ ಡಿಪಾಜಿಟ್ ಮೊಬಲಗು ಹಾಜರ್ ಮಾಡದೇಲೂ ಬಾಕಿ ಮೊಬಲಗು ಪಾವತಿ ಮಾಡದೇಲೂ ತಪ್ಪಿದರೆ ಈ ಕಟ್ಟಡಗಳು ಪುನಹ ಹರಾಜು ಮಾಡಲ್ಪಡುವವು. ಹೀಗೆ ಮಾಡುವದರಿಂದ ವುಂಟಾಗುವ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನು ಗುರಿಯಾಗುವನು.

4. ಹರಾಜಿನಲ್ಲಿ ದರಖಾಸ್ತು ಮಾಡುವವರು ಆವರ ಸ್ವಂತಕ್ಕಾಗಿ ಸವಾಲು ಮಾಡುವ ಬಗ್ಯೆ ಅಥವಾ ಇತರರಿಗೋಸ್ಕರ ಸವಾಲ್ ಮಾಡುವ ಬಗ್ಯೆ ಸ್ಪಷ್ಟವಾಗಿ ಲಿಖಿತಮೂಲಕ ತಿಳಿಸಬೇಕು. ಹೀಗೆ ಮಾಡದೆ ಯಿದ್ದರೆ ಅಂಥಾವರ ಸವಾಲ್ ತಿರಸ್ಕರಿಸಲ್ಪಡುತ್ತೆ.

5. ಹೀಗೆ ಮಾಡುವ ಹರಾಜು ದಿವಾ೯ ಸಾಹೆಬರವರಿಂದ ಕಾಯಂ ಆಗುವ ವರಿಗೆ ಖೈದ್ ಆಗತಕ್ಕದ್ದಲ್ಲ. ದಿವಾ೯ ಸಾಹೆಬರವರು ಹರಾಜಿನಲ್ಲಿ ಮಾಡುವ ಸವಾಲ್ ಯಾವಾಗಲಾಗಲಿ ಯಾವ ಕಾರಣವನ್ನೂ ನಮೂದಿಸದೇ ಅಂಗೀಕರಿಸುವದಕ್ಕೂ ತಿರಸ್ಕರಿಸುವದಕ್ಕೂ ಸ್ವತಂತ್ರ ವುಳ್ಳವರಾಗಿ ಯಿರುತ್ತಾರೆ.

6. ಹರಾಜಿನಲ್ಲಿ ಪಡದವರು ಪೂರಾ ಮೊಬಲಗು ಪಾವತಿ ಮಾಡಿ ದಿವಾ೯ ಸಾಹೆಬರವರಿಂದ ಹರಾಜು ಕಾಯಂ ಆದನಂತರ ಸ್ವತ್ತುಗಳು ಆವರ ಸುಪರ್ದು ಮಾಡಲ್ಪಡುತ್ತೆ. ಶಿವಾಯಿ ಹರಾಜು ಸರಟಿಫಿಕೇಟ್ ಸ್ಟೆ೯ ಮೊಹರಿನಿಂದ ಕೊಡಲ್ಪಡುತ್ತೆ.

7. ಈ ಕಟ್ಟಡಗಳ ಪ್ಲಾ೯ ಸಿಟಿ ಮ್ಯುನಿಸಿಪೆಲ್ ಆಫೀಸಿನಲ್ಲಿ ಯಿರುತ್ತೆ. ಜನಗಳು ಬಂದು ನೋಡಬಹುದು.

ಕಟ್ಟಡಗಳ ತಪಸೀಲ್.

ಬಾರ್‌ಕೋಸ್ ಕಟ್ಟಡಾ ಅಥವಾ ಗ್ಯಾರಿಸ್ಸ ಆಸ್ಪತ್ರೆ ಇದರಲ್ಲಿ ಪೂರ್ವ ಮತ್ತು ಪಶ್ಚಿಮಭಾಗದಲ್ಲಿ ಕುಮಾಂಡು ಗೋಡೆಗೆ ಕೇರಿದ ಜಮೀನ್ ಯಿದರ ಮಧ್ಯೆ ಬೈಲು ಸಹ.

ಜಕ್ಕುಬಂದಿ

ಉತ್ತರಕ್ಕೆ—ಸಂಣ ಬಂಗಲೆ.
ದಕ್ಷಿಣಕ್ಕೆ—ಅಪ್ಪಾವು ಮೊದಲ್ಯಾರ್ರ ಬಂಗಲೆ.
ಪೂರ್ವಕ್ಕೆ—ಉತ್ತರದಿಂದ ದಕ್ಷಿಣಕ್ಕೆ ಹೋಗುವ ಕೋಟೇ ರಸ್ತೆ.
ಪಶ್ಚಿಮಕ್ಕೆ—ಕೋಟೇ ಗೋಡೆ ರಸ್ತೆ.

ಕೆಳಭಾಗದ ತೋಪು ಖಾನೆ ಅಥವಾ ದಂಡಿನ ಸಾರ್ವಾ ಯಿ ಪತಕ್ಕ ಗಡಂಗು ಯಿದರ ಮಧ್ಯೆ ಮೂರು ಪಾರ್ಶ್ವದಲ್ಲಿಯೂ ಬೈಲು ಯಿದರಲ್ಲಿ ಹಳೇ ಬಾದೂಮುಖಾನೆ ಕೇರಿಕೊಂಡಿರುತ್ತೆ.

ಉತ್ತರಕ್ಕೆ—ಅಪ್ಪಾವು ಮೊದಲ್ಯಾರ್ರ ಬಂಗಲೆ ಯಿಂದ ಗುಡಿಗೆ ಹೋಗುವ ಸಂಣ ರಸ್ತೆ.
ದಕ್ಷಿಣಕ್ಕೆ—ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ದೊಡ್ಡ ಹೊಸ ರಸ್ತೆ.
ಪೂರ್ವಕ್ಕೆ—ಉತ್ತರದಿಂದ ದಕ್ಷಿಣಕ್ಕೆ ಹೋಗುವ ದೊಡ್ಡ ರಸ್ತೆ.
ಪಶ್ಚಿಮಕ್ಕೆ—ಕೋಟೆಯಗೋಡೆ ಬಾಜೂ ರಸ್ತೆ.

ತಾರೀಖು 6ನೇ ಜೂ೯ 1890.

ಇದರಿಂದ ಯಲ್ಲರಿಗೂ ತಿಳಿಯುಪಡಿಸುವದೇನಂದರೆ,—ಮಾಗಡಿ ತಾಲ್ಲೂಕು ಸಾವಂದುರ್ಗದ ಜಂಗಲ್‌ನಲ್ಲಿ ಬಹಳ ಬಿದುರುಗಳು ಅಂದರೆ ದೊಡ್ಡದು ಸಂಣದು ಸಹ ಕಡಿಯಲು ಲಾಯಖ್ಖಾಗಿ ಯಿರುತ್ತದೆ. ಯಿವುಗಳನ್ನ 10—7—90ನೇತಾರೀಖು ದಿವಿ 11 ಘಂಟೆಗೆ ಮಾಗಡೀಲಿ ತಾಲ್ಲೂಕು ಅಮಲ್‌ದಾರ್ರವರ ರೂಬರೂಬ್ ಹರಾಜ್ ಮಾಡುತ್ತೆ.

ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರ ವಂಜಾರಾತಿಗೆ ವಳಪಟ್ಟು ಯಿರುತ್ತೆ.

2. ಖಾಯಿಷ್ ವುಳ್ಳವರು ಫಾರೆಸ್ಟ್ ಇಲಾಖೆಯವರಿಂದ ಗೊತ್ತುಮಾಡಿಕೊಡುವ ಬ್ಲಾಕಿನಲ್ಲಿ ಬೊಂಬುಗಳನ್ನ ಕಡದು ಸಾಗಿಸಿ ಕೊಳ್ಳತಕ್ಕದ್ದಾಗಿರುತ್ತೆ.

3. ಆಕ್ಷೈರ್ ಸವಾಲ್ ಕೈದುಮಾಡಿದ ಕೂಡ್ಲೆ ಪಡ ಸವಾಲ್‌ದಾರನು ಹರಾಜು ಮೊಬಲಗಿನಲ್ಲಿ ಶೇಕಡಾ 25 ರೂಪಾಯಿ ಮೇರೆ ಡಿಪಾಜಿಟ್ ಯಿಡಬೇಕು. ಹರಾಜು ಡೆಪ್ಯೂಟಿ ಕಮ್ಮಿಷನರ್ ಸಾಹೆಬರವರು ಮಂಜೂರ್ಮಾಡಿದನಂತರ ಬಾಕಿ ಮೂರುಭಾಗದ ಮೊಬಲಗ ಕೂಟ್ಟು ಬಿಡಬೇಕು. ನಂತರ ಗೊತ್ತುಮಾಡಿ ಕೊಡುವ ಬ್ಲಾಕಿನಲ್ಲಿ ಬಿದುರುಗಳನ್ನು ಕಡಿಸಲು ಅಪ್ಪಣೆ ಕೊಡಲಾಧೀತು, ಕಡಿಸುವಾಗ ಜಂಗಲ್‌ನಲ್ಲಿ ಇತರ ಮರ ಯಾ ಮರಗಳನ್ನು ಕಡಿಯಕೂಡದು, ಯಾ ಜಾಯಾ ಮಾಡಕೂಡದು, ಅಥವಾ ಮತ್ಯಾವ ಡಾಮೇಜನ್ನು ಮಾಡಕೂಡದು. ಇದಕ್ಕೆ ವಿರೋಧವಾಗಿ ನಡದರೆ ಫಾರೆಸ್ಟ್ ರೂಲ್ಸ್ ಮೇರೆ ಅವರು ಮಾಜಿಸ್ಟ್ರೇಟರಲ್ಲಿ ವಿಚಾರಣೆಗೆ ವಳಪಡುವರು.

4. ಆವಶ್ಯಕವಾದಷ್ಟು ಬಿದರು ಕಡಿಯೋಣ ಪೂರೈಸಿದ ಕೂಡ್ಲೆ ಫಾರೆಸ್ಟ್ ಇಲಾಖೇಯವರು ಯಣಿಕೆ ಮಾಡಿದನಂತರ ಕರಾರುದಾರನು ಯುಕ್ತಾನುಸಾರ ಕೊಡುವ ವಾಯಿದೆಯಲ್ಲಿ ಭಂಡಿಗಳಲ್ಲಿ ಸಾಗಿಸಿಕೊಳ್ಳಲು ಪರ್ಮತಿ ಮೇರೆ ಲೈಸೆನ್ಸ್ ಕೊಡಲಾಧೀತು.

5. ಬಾಕಿ ಅಂದರೆ ಹರಾಜುಮೊಬಲಗು ಪೈಕಿ ಮೂರು ಭಾಗದ ಹಣ ಕೊಡಲು ತಪ್ಪಿದರೆ ಡಿಪಾಜಿಟ್ ಬಗೆ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲಾಧೀತು, ಅಲ್ಲದೆ ಹರಾಜುದಾರ್ರಿಗೆ ಕೊಟ್ಟಿರಬಹುದಾದ ಬ್ಲಾಕನ್ನು ಪುನಹ ಹರಾಜು ಮಾಡಿಸುತ್ತೆ, ಇದಕ್ಕಾಗಿ ತಗಲುವ ಖರ್ಚು ಮತ್ತು ಲುಕ್‌ಸಾನಿಗೂ ಮೊದಲಿನ ಹರಾಜುದಾರನೇ ಗುರಿಯಾಗಿ ಯಿರತಕ್ಕದ್ದು.

ಪಿ. ಯರ್. ಕೃಷ್ಣಮೂರ್ತಿ,
ಡೆಪ್ಯೂಟಿ ಕಮ್ಮಿಷನರ್.

ಪ್ಯಾಟೇರ್ಷ ಆಫಿಸ್.

23ನೇ ಮಾಹೆ ಮೇ 1890ನೇ ಇಸವಿ.

ಇನ್ಸಿಹಾರ್‌ನಾಮೆ.

ಹೊನ್ನವಳ್ಳಿ ಪ್ಯಾಟೇರ್ಷ ವಾಚರಾಗಿ ಯಿದ್ದು ಹಾಲಿ ಮೃತಪಟ್ಟು ಯಿರುವ ಶೇಷ ಯಂಬುವನಿಗೆ ಸದರೀಯವನು ಸದರೀ ಪ್ಯಾಟೇಷನಿನಲ್ಲಿ ಕಾಮಗಾರಿ ಮಾಡಿಸಿದ್ದಕ್ಕಾಗಿ (83—5—6) ರೂಪಾಯಿಗಳು ಸಲ್ಲಬೇಕಾಗಿ ಯಿದೆ. ಈ ಮೊಬಲಗ್ಯೆ ಬಾಧ್ಯತೆವುಳ್ಳ ಜನಗಳು ಈ ತಾರೀಖು ಲಾಗಾಯತು ಆರು ತಿಂಗಳ ವಳಗಾಗಿ ಹಕ್ಕುದಾರಿ ಸರಟಿಫಿಕೇಟ್ ನೊಡನೆ ನಮ್ಮ ಆಫಿಸಿಗೆ ಅರ್ಜೀಬರದು ಕೊಳ್ಳಬೇಕು, ಈ ವಾಯಿದೆ ಪೂರೈಸಿದನಂತರ ಮೊಬಲಗು ಸರ್ಕಾರಕ್ಕೆ ಕೇರಿಸಿಕೊಳ್ಳಲ್ಪಡುತ್ತೆ. ನಂತರ ಯಾರ ಹಕ್ಕುದಾರಿಯನ್ನೂ ವಂಜಾರ್ಮಾಡುವದಿಲ್ಲ.

ಯಸ್. ಬೂಪೂರಾವ್,
ಸಬ್ ಅಸಿಸ್ಟಂಟ್ ಕ್ವಾಸರ್‌ವೇಟರ್ ಪ್ಯಾಟೇರ್ಷ.